ಕರ್ನಾಟಕಸರ್ಕಾರ

**ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

**ರಾಷ್ಟ್ರೀಯ ಸೇವಾ ಯೋಜನೆ**

ಸಂಖ್ಯೆ: ಪಪೂಶಿಇ/ರಾಸೇಯೋ/204/2019-20 ದಿನಾಂಕ: 22-08-2019

**ಜ್ಞಾಪನ**

**ವಿಷಯ :** ಪ್ರಕೃತಿ ವಿಕೋಪಕ್ಕೆ ಒಳಗಾದ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಎನ್.ಎಸ್.ಎಸ್. ಘಟಕ ಹೊಂದಿರುವ ಕಾಲೇಜಿನವರು ಪುನರ್ ವ್ಯವಸ್ಥೆಗೆ ಸಹಕಾರ ನೀಡಿರುವ ಮತ್ತು ನಿಧಿ ಸಂಗ್ರಹಿಸಿರುವ ಬಗ್ಗೆ.

**ಉಲ್ಲೇಖ:** ಸಂಖ್ಯೆಃಯುಸೇಇ/ರಾಸೇಯೋ/13/2019-20/260 ದಿನಾಂಕ 08/08/2019

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಪ್ರಕೃತಿ ವಿಕೋಪಕ್ಕೆ ಒಳಗಾದ ಉತ್ತರ ಕರ್ನಾಟಕ, ಕೊಡಗು, ಬಾಗಲಕೋಟೆ, ಗದಗ, ಬಿಜಾಪುರ ಇತರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಎನ್.ಎಸ್.ಎಸ್. ಘಟಕ ಹೊಂದಿರುವ ಕಾಲೇಜಿನವರು ಪುನರ್ ವ್ಯವಸ್ಥೆಗೆ ಸಹಕಾರ ನೀಡಿರುವ ಈ ದೃಷ್ಟಿಯಿಂದ ಇಂತಹ ಸಂಕ್ಟದ ಸಮಯದಲ್ಲಿ ರಾಸೇಯೋಯ ಕಾಲೇಜುಗಳು ಸ್ವಯಂ ಪ್ರೇರಿತರಾಗಿ ಪುನರ್ ವ್ಯವಸ್ಥೆಗೆ ಸಂಬಂಧಿಸಿದಂತೆ ನಿಧಿ ಸಂಗ್ರಹ ಮಾಡಬಹುದಾಗಿದೆ, ಕಾಲೇಜುಗಳಿಂದ ಪ್ರಾಂಶುಪಾಲರ ಅನುಮತಿ ಪಡೆದು ಸಂಯೋಜನಾಧಿಕಾರಿ ಅಥವಾ ಯೋಜನಾಧಿಕಾರಿಗಳ ನೇತೃತ್ವದಲ್ಲಿಯೇ ನಿಧಿ ಸಂಗ್ರಹ ಮಾಡಬೇಕು. ಸಂಗ್ರಹಿಸಿದ ನಿಧಿಯನ್ನು ಮಾನ್ಯ ಮುಖ್ಯ ಮಂತ್ರಿ ಪರಿಹಾರ ನಿಧಿಗೆ ಜಮಾ ಮಾಡಿ, ಸದರಿಯವರಿಗೆ ಸಂಯೋಜನಾಧೀಕಾರಿ ಮತ್ತು ಯೋಜನಾಧಿಕಾರಿಗಳು ಪಾರದರ್ಶಕವಾಗಿ ನಿಧಿ ಸಂಗ್ರಹಿಸುವ ಕಡೆಗೆ ಮಾರ್ಗದರ್ಶನ ಮಾಡತಕ್ಕದ್ದು.

1. ನಿಧಿ ಸಂಗ್ರಹಿಸಿ ಮುಖ್ಯ ಮಂತ್ರಿಗಳ ಖಾತೆಗೆ ಜಮಾ ಮಾಡಿರುವ ಬಗ್ಗೆ ನಿರ್ದೇಶನಾಲಯ ಮತ್ತು ಈ ಕಛೇರಿಗೆ ಖಡ್ಡಾಯವಾಗಿ ಮಾಹಿತಿ ನೀಡುವಂತೆ ಸೂಚಿಸತಕ್ಕದ್ದು.
2. ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಸಂಬಂಧಿಸಿದ ಜಿಲ್ಲಾಡಳಿತ/ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳ/ ಕಾಲೇಜುಗಳ ಮೂಲಕ ಕೊಡಗು ಜಿಲ್ಲಾಡಳಿತಕ್ಕೆ ಕಳುಹಿಸಿಕೊಡಬಹುದಾಗಿದೆ.
3. ಪರಿಸ್ಥಿತಿ ಯಥಾಸ್ಥಿತಿಗೆ ಬಂದ ಬಳಿಕ ಹತ್ತಿರದ ನಿರ್ದೇಶನಾಲಯ ಹಾಗೂ ಕಾಲೇಜುಗಳು ಪುನರ್ ವ್ಯವಸ್ಥೆ ಮತ್ತು ಶ್ರಮದಾನ ಕಾರ್ಯಕ್ರಮಗಳನ್ನು ಸ್ವಯಂ ಸೇವಕರ ಮೂಲಕ ನಿರ್ದೇಶನಾಲಯಗಳು ಈ ಕುರಿತು ತೊಡಗಿಸಿಕೊಳ್ಳುವ ಬಗ್ಗೆ ಯೋಜನೆಯನ್ನು ರೂಪಿಸಬಹುದಾಗಿದೆ. ಶಿಬಿರಗಳ ಮೂಲಕ ಸಹಕಾರ ನೀಡಬಹುದಾಗಿದೆ. ಹಾಗೂ ಪುನರ್ ವ್ಯವಸ್ಥೆಗೆ ಬಳಸಿಕೊಳ್ಳಲು ಕೋರಲಾಗಿದೆ.

4. 2019–20ರ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಸಂದರ್ಭಾನುಸಾರವಾಗಿ ಗರಿಷ್ಠ ಕಾರ್ಯಕ್ರಮಗಳನ್ನು ಎನ್.ಎಸ್.ಎಸ್ ರಾಜ್ಯ ಕೋಶ ಮತ್ತು ಎನ್.ಎಸ್.ಎಸ್. ನಿರ್ದೇಶನಾಲಯದಡಿಯಲ್ಲಿರುವ ಕಾಲೇಜುಗಳು ನಡೆಸಲು ಕ್ರಮ ಕೈಗೊಳ್ಳಲು ಕೋರಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಸರ್ಕಾರದ ಸುತ್ತೋಲೆ ಪತ್ರವನ್ನು ಲಗತ್ತಿಸಿದೆ.**

ಇಂತಿ ತಮ್ಮ ವಿಶ್ವಾಸಿ

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳು:

1. ಡಾ: ಗಣನಾಥ ಶೆಟ್ಟಿ, ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,ಎನ್.ಎಸ್.ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
2. ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳು
3. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು.
4. ಸಹಾಯಕ ನಿರ್ದೇಶಕರು, ಇ–ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಸಂಖ್ಯೆ: ಯುಸೇಇ/ರಾಸೇಯೋ/13/2019-20/339

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 11.09.2019.

ಇವರಿಗೆ,

ಸಂಯೋಜನಾಧಿಕಾರಿಗಳು,
ರಾಷ್ಟ್ರೀಯ ಸೇವಾ ಯೋಜನೆ,
ವಿಶ್ವವಿದ್ಯಾನಿಲಯ ಮತ್ತು ನಿರ್ದೇಶನಾಲಯಗಳು.

ಮಾನ್ಯರೇ,

ವಿಷಯ: ಪ್ರಕೃತಿ ವಿಕೋಪ ಸಂತ್ರಸ್ತರ ಪರಿಹಾರ ಕಾರ್ಯಗಳಿಗೆ ಎನ್.ಎಸ್.ಎಸ್. ಸ್ವಯಂ ಸೇವಕ /ಸೇವಕಿಯರನ್ನು ನಿಯೋಜಿಸುವ ಬಗ್ಗೆ

ಉಲ್ಲೇಖ: 1.ಈ ಕಛೇರಿ ಪ.ಸಂ.:ಯುಸೇಇ/ರಾಸೇಯೋ/13/2019-20/260, ದಿ:08.08.2019
2.ಈ ಕಛೇರಿ ಪ.ಸಂ.:ಯುಸೇಇ/ರಾಸೇಯೋ/13/2019-20/300, ದಿ:22.08.2019
3.ಈ ಕಛೇರಿ ಪ.ಸಂ.:ಯುಸೇಇ/ರಾಸೇಯೋ/13/2019-20/301, ದಿ:22.08.2019
4.ಕನ್ನಡ ಪ್ರಭ ದಿನ ಪತ್ರಿಕೆಯ ಮಾನ್ಯ ಮುಖ್ಯಮಂತ್ರಿಗಳ ಲೇಖನ ದಿ:11.09.2019

***

ಮೇಲಿನ ಉಲ್ಲೇಖ (4)ರಂತೆ ದಿನಾಂಕ:11.09.2019ರಂದು ಮಾನ್ಯ ಮುಖ್ಯ ಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪರವರು ಕನ್ನಡ ಪ್ರಭ ದಿನಪತ್ರಿಕೆಯ ಮುಖಪುಟ ಮತ್ತು 5ನೇ ಪುಟದಲ್ಲಿ "ಎನ್.ಎಸ್.ಎಸ್. ಬಂಧುಗಳೇ ಬನ್ನಿ ರಾಜ್ಯ ಕಟ್ಟೋಣ" ಎಂದು ರಾಷ್ಟ್ರೀಯ ಸೇವಾ ಯೋಜನೆಯ ಇತಿಹಾಸ ಹಿನ್ನೆಲೆ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿವರವಾದ ಲೇಖನವನ್ನು ಬರೆದಿದ್ದಾರೆ. ಸದರಿ ಲೇಖನವು ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳಿಗೆ ಸ್ಫೂರ್ತಿಯನ್ನು ನೀಡುವಂತಿದೆ. ಈಗಾಗಲೇ ಉಲ್ಲೇಖ (1), (2) ಮತ್ತು (3)ರಂತೆ ಕರ್ನಾಟಕದಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯ ಮತ್ತು ಪುನರ್ ವ್ಯವಸ್ಥೆಗೆ ಸಹಕಾರ ನೀಡುವ ನಿಟ್ಟಿನಲ್ಲಿ ಮಾರ್ಗದರ್ಶಕ ಪತ್ರವನ್ನು ಬರೆಯಲಾಗಿತ್ತು. ಉಲ್ಲೇಖ (1)ರ ಪತ್ರದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ತಿಳಿಸಲಾಗಿತ್ತು. ಈ ಮಾನ್ಯ ಮುಖ್ಯಮಂತ್ರಿಯವರು ಮನವಿ ಮಾಡಿರುವುದರಿಂದ ಪ್ರಕೃತಿ ವಿಕೋಪ ಉಂಟಾದ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯ ಹಾಗೂ ಪುನರ್ ವ್ಯವಸ್ಥೆಗೆ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ/ಸೇವಕಿಯರನ್ನು ನಿಯೋಜಿಸಿ ಶ್ರಮದಾನ ಹಾಗೂ ಇತರ ಚಟುವಟಿಕೆಗಳ ಮೂಲಕ ಸಹಕಾರ ನೀಡುವಂತೆ ತಮ್ಮನ್ನು ಕೋರುತ್ತಿದ್ದೇನೆ. ಈ ಬಗ್ಗೆ ತಮ್ಮ ವ್ಯಾಪ್ತಿಗೆ ಬರುವ ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮಾಧಿಕಾರಿಗಳ ಸಭೆ ಕರೆದು ಸೂಕ್ತ ಕಾರ್ಯಯೋಜನೆಯೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕೋರಲಾಗಿದೆ. 2019-20ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಎಲ್ಲಾ ಚಟುವಟಿಕೆಗಳನ್ನು ಪ್ರಕೃತಿ ವಿಕೋಪಕ್ಕೆ ಒಳಗಾದ ಸ್ಥಳಗಳಲ್ಲಿ ನಡೆಸುವಂತೆ ಕೋರಲಾಗಿದೆ. ಈ ಪತ್ರದೊಂದಿಗೆ ಮಾನ್ಯ ಮುಖ್ಯಮಂತ್ರಿಯವರು ಬರೆದ ಲೇಖನದ ಪ್ರತಿಯನ್ನು ಲಗತ್ತಿಸಲಾಗಿದೆ. ಅಲ್ಲದೇ ಉಲ್ಲೇಖ (3) ಪತ್ರದಲ್ಲಿ ತಿಳಿಸಿದ ಮಾಹಿತಿಗಳನ್ನು ತಪ್ಪದೇ ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

(ಡಾ.ಗಣನಾಥ ಶೆಟ್ಟಿ).,
ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರತಿ:

1. ಅಪರ ಮುಖ್ಯ ಕಾರ್ಯದರ್ಶಿಗಳು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಮಾಹಿತಿಗಾಗಿ.
2. ಅಪರ ಮುಖ್ಯ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯ ಇವರ ಮಾಹಿತಿಗಾಗಿ
3. ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್ ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ - ಇವರ ಮಾಹಿತಿಗಾಗಿ.
4. ಕುಲಸಚಿವರು ಎಲ್ಲಾ ವಿಶ್ವವಿದ್ಯಾನಿಲಯ ಹಾಗೂ ನಿರ್ದೇಶನಾಲಯ
5. ಮಾನ್ಯ ಮುಖ್ಯ ಮಂತ್ರಿಗಳವರ ಮಾಧ್ಯಮ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

PC Correspondence 2019-20